**3 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ, ಹುಬ್ಬಳ್ಳಿ**

**ಸಿ.ಸಿ.ನಂ.3281/2023**

ಪಿರ್ಯಾದಿಃ ಮೆ// ಅನೀಲಕುಮಾರ ಆಂಡ ಕಂಪನಿ
ಹುಬ್ಬಳ್ಳಿ

**ವಿರುದ್ಧ**

ಆರೋಪಿಃ ಗಂಗಾಧರ ತಂದೆ ಅರ್ಜುನಸಾ ಕಲಬುರ್ಗಿ
ಹುಬ್ಬಳ್ಳಿ

**ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 251 ರ ಅಡಿಯಲ್ಲಿ ಆರೋಪಣೆ -**

ಆರೋಪಿತರಾದ ನೀವು ಪಿರ್ಯಾದಿದಾರರೊಂದಿಗೆ 2015 ರಿಂದ ವ್ಯವಹರಿಸುತ್ತಿದ್ದು, ಪಿರ್ಯಾದಿದಾರರಿಗೆ ಹತ್ತಿ, ಮತ್ತು ಬೀಜಗಳನ್ನು ಸರಬರಾಜು ಮಾಡುತ್ತಿದ್ದು ನೀವು ಪಿರ್ಯಾದಿದಾರರಿಂದ ಹತ್ತಿ ಸರಬರಾಜು ಮಾಡುವ ಬಾಬತು ರೂ.30,00,000/- ಗಳನ್ನು ಮುಂಗಡ ಹಣವನ್ನು ದಿನಾಂಕ 05.09.2020 ರಂದು ಚೆಕ ನಂ.357709 ಯುನಿಯನ ಬ್ಯಾಂಕ ಆಫ ಇಂಡಿಯ ಮುಲಕ ನಿಮಗೆ ನೀಡಿದ್ದು ನೀವು ಪಿರ್ಯಾದಿದಾರರಿಗೆ ಹತ್ತಿಯನ್ನು ಸರಬರಾಜು ಮಾಡದೆ ಇದ್ದ ಕಾರಣ ಪಿರ್ಯಾದಿದಾರರು ತಮಗೆ ಬರಬೇಕಾದ ಮುಂಗಡ ಹಣವನ್ನು ಸಂದಾಯ ಮಾಡುವಂತೆ ಕೇಳಿಕೊಂಡಾಗ ಆರೋಪಿತರಾದ ನೀವು ದಿಃ28.07.2023 ಯುನಿಯನ ಬ್ಯಾಂಕ ಆಫ್ ಇಂಡಿಯಾ. ಹುಬ್ಬಳ್ಳಿ ಮೇನ ಬ್ರಾಂಚ ಚೆಕ್ಕ ನಂ.370162 ರೂ.30,00,000/- ಎಂದು ನಮೂದಿಸಿ ಫಿರ್ಯಾದಿದಾರರಿಗೆ ಒಂದು ಚೆಕ್ಕನ್ನು ಕೊಟ್ಟಿರುತ್ತೀರಿ. ಸದರಿ ಚೆಕ್ಕನ್ನು ನಗದಿಕರಣಕ್ಕೆ ಫಿರ್ಯಾದಿದಾರರು ತಮ್ಮ ಬ್ಯಾಂಕ ಆದ ಯುನಿಯನ ಬ್ಯಾಂಕ ಆಫ್ ಇಂಡಿಯಾ. ಎಪಿಮಸಿ ಹುಬ್ಬಳ್ಳಿ ಶಾಖೆಗೆ ಸಲ್ಲಿಸಿದಾಗ ಸದರಿ ಚೆಕ್ಕು **"FUNDS INSUFFICIENT"** ಎಂಬ ಶರಾದೊಂದಿಗೆ ದಿಃ28.07.2023, ರಂದು ಹಿಂದಿರುಗಿಸಲಾಗಿದ್ದು, ಈ ಬಗ್ಗೆ ಫಿರ್ಯಾದಿದಾರರು ದಿಃ09.08.2023 ರಂದು

ನೋಟಿಸು ನೀಡಿದ್ದು, ಸದರಿ ನೋಟಿಸು ನಿಮಗೆ ದಿನಾಂಕ 18.08.2023 ರಂದು ನೀವು ಸ್ವೀಕರಿಸಿದ್ದು ಆದರೆ ಅದಕ್ಕೆ ಯಾವುದೇ ಉತ್ತರ ನೀಡಿರುವುದಿಲ್ಲ ಮತ್ತು ಚೆಕ್ಕಿನ ಮೊತ್ತವನ್ನು ಮರುಪಾವತಿಸಿರುವುದಿಲ್ಲ. ಆದ್ದರಿಂದ ನೀವು ಕಲಂ 138 ಎನ್.ಐ ಆಕ್ಟ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಅಪರಾದ ಎಸಗಿರುವುದಾಗಿ ಆರೋಪಿಸಲಾಗಿದೆ.

ಪ್ರ 1. ನಿಮಗೆ ಓದಿ ಹೇಳಿ ಕೇಳಿದ ಆರೋಪಣೆ ತಿಳಿಯಿತೇ ?
ಉತ್ತ್ತರ ಃ

ಪ್ರ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕಾ ?

ಉತ್ತ್ತರ ಃ

(ಬಹಿರಂಗ ನ್ಯಾಯಾಲಯದಲ್ಲಿ ಮೇಲ್ಕಂಡ ಪ್ರಶ್ನೆಗಳನ್ನು ಆರೋಪಿಗೆ ಓದಿ ಹೇಳಿ ಕೇಳಲಾಗಿ ಆರೋಪಿಯು ನುಡಿದ ಪೂರ್ಣವಾದ ಹಾಗು ಸತ್ಯವಾದ ಹೇಳಿಕೆಗಳನ್ನು ಈ ಬರಹವು ಒಳಗೊಂಡಿದೆ ಎಂದು ಈ ಮೂಲಕ ದೃಢಿಕರಿಸಿದೆ)

ದಿನಾಂಕ ಃ 02.11.2023
ಸ್ಥಳ ಃ ಹುಬ್ಬಳ್ಳಿ.

(ಶ್ರೀಮತಿ ಶರ್ಮಿಳಾ ಕಾಮತ ಕೆ)
3 ನೇ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಹುಬ್ಬಳ್ಳಿ.

–